ಸಾಕ್ಷಿ ಯನ್ನು ದಿಃ 08.08.2023 ರಂದು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದ**

1. ಸರ್ವೆ ನಂಬರ್ 94/11(ಪಿ1) ರಲ್ಲಿ ಒಟ್ಟು 4 ಎಕರೆ ಜಮೀನು ಇರುತ್ತದೆ. ಸದರಿ ಜಮೀನಿನ ಬಗ್ಗೆ ನನ್ನ ಪತಿಯು ನನಗೆ ಮಾಹಿತಿಯನ್ನು ನೀಡಿರುತ್ತಾರೆ. ಸದರಿ ಜಮೀನಿನ ಚಕ್ಕುಬಂದಿಃ ಪೂರ್ವಕ್ಕೆಃ ನಮ್ಮದೇ ಜಮೀನು, ಪಶ್ಚಿಮಕ್ಕೆಃ ಬೋರೇಗೌಡ ಮತ್ತು ಶಿವೇಗೌಡ ರವರ ಜಮೀನು, ಉತ್ತರಕ್ಕೆಃ ಕಾಳಮ್ಮ ರವರ ಜಮೀನು, ದಕ್ಷಿಣಕ್ಕೆಃ ನಾಲೆ ಇರುತ್ತದೆ.
2. ಸರ್ವೆ ನಂಬರ್ 94/11(ಪಿ1) ರಲ್ಲಿ 2 ಎಕರೆ ಚಕ್ಕುಬಂದಿ ಪೂರ್ವಕ್ಕೆಃ ಜವರೇಗೌಡ ರವರ 94/6 ರ ಜಮೀನು, ದಕ್ಷಿಣಕ್ಕೆಃ ಬೋರೇಗೌಡ ಮತ್ತು ಶಿವೇಗೌಡ ರವರ ಜಮೀನು, ಉತ್ತರಕ್ಕೆಃ ಕಾಳಮ್ಮ ರವರ ಜಮೀನು, ಪಶ್ಚಿಮಕ್ಕೆಃ ನಾಲೆ ಇರುತ್ತದೆ. ಸದರಿ ಮಾಹಿತಿಯನ್ನು ನನ್ನ ಪತಿ ನನಗೆ ನೀಡಿರುತ್ತಾರೆ.
3. ಸರ್ವೆ ನಂಬರ್ 94/11(ಪಿ1) ರಲ್ಲಿ 4 ಎಕರೆ ಪೈಕಿ 2 ಎಕರೆಯನ್ನು ಲೇಟ್ ಜವರೇಗೌಡ ರವರ ಮಗ ಮೊಗಣ್ಣೆಗೌಡ ರವರಿಗೆ ಜವರೇಗೌಡ ರವರ ಒಪ್ಪಿಗೆ ಮೇರೆಗೆ ಖಾತೆಯಾಗಿರುತ್ತದೆ.
4. ಬೋರೆಗೌಡ ರವರ ಪತ್ನಿ ಸಣ್ಣತಾಯಮ್ಮ ಎಂಬುವವರು ಇಲ್ಲ ಸದರಿಯವರು ಹೆಸರು ಪುಟ್ಟತಾಯಮ್ಮ ಎಂದರೆ ಸರಿ.
5. ಸಣ್ಣೇಗೌಡ ರವರ ಮಗ ಶಿವಣ್ಣೇಗೌಡ ಎಂಬುವವರು ಇಲ್ಲ ಸದರಿಯವರು ಹೆಸರು ಶಿವೇಗೌಡ ಎಂದರೆ ಸರಿ.
6. ಕುಳ್ಳೆಗೌಡ ರವರು ನಮ್ಮ ಮಾವ ಜವರೇಗೌಡ ರವರ ತಂದೆ. ಸದರಿಯವರಿಗೆ 3 ಜನ ಮಕ್ಕಳು ಎಂದರೆ ಸರಿ. ಅವರ ಹೆಸರು, ತೊಪೇಗೌಡ, ಮೊಗಣ್ಣೆಗೌಡ ಮತ್ತು ಸಣ್ಣತಮ್ಮೇಗೌಡ. ಸದರಿ ಕುಳ್ಳೇಗೌಡ ರವರಿಗೆ, ತೊಪೇಗೌಡ, ಸಣ್ಣೇಗೌಡ ಮತ್ತು ಜವರೇಗೌಡ ಎಂದರೆ ಸರಿ.
7. ಪ್ರಸ್ತುತ ದಾವೆಯಲ್ಲಿರುವ 2 ನೇ ಪ್ರತಿವಾದಿಯವರ ಮಗನ ಹೆಸರಿನಲ್ಲಿ ಸರ್ವೆ ನಂಬರ್ 94/11(ಪಿ1) ರಲ್ಲಿ 1 ಎಕರೆ ಜಮೀನು ಇದೆ ಎಂದರೆ ಸರಿಯಲ್ಲ. ಸದರಿ ಜಮೀನಿನಲ್ಲಿ ಅಡಿಕೆ ತೋಟ ಮಾಡಿಕೊಂಡು ಸದರಿಯವರು ಸ್ವಾಧೀನದಲ್ಲಿ ಇದ್ದಾರೆ ಎಂದರೆ

ಸರಿಯಲ್ಲ.

8. ಸರ್ವೆ ನಂಬರ್ 94/11(ಪಿ1) ರಲ್ಲಿ 1 ಎಕರೆ ಜಮೀನು ಬೋರೇಗೌಡ ರವರ ಹೆಸರಿನಲ್ಲಿ ಇದೆ ಎಂದರೆ ಸರಿಯಲ್ಲ. ಅದು ನನ್ನ ಹೆಸರಿನಲ್ಲಿ ಇದೆ ಎಂದು ನುಡಿಯುತ್ತಾರೆ.
9. ಪ್ರಸ್ತುತ ದಾವೆಯನ್ನು ಸಲ್ಲಿಸುವ ಕಾಲಕ್ಕೆ ದಾವಾ ಚಕ್ಕುಬಂದಿಯ ಉತ್ತರಕ್ಕೆ ಪ್ರತಿವಾದಿಗಳ ಜಮೀನು ಎಂದು ಬರೆಸಿದ್ದಿರಾ ಎಂದರೆ , ಬರೆಸಿಲ್ಲ ಎಂದು ನುಡಿಯುತ್ತಾರೆ.
10. ಪ್ರಸ್ತುತ ದಾವೆಯನ್ನು ಸಲ್ಲಿಸುವ ಕಾಲಕ್ಕೆ ದಾವಾ ಚಕ್ಕುಬಂದಿಯ ಪೂರ್ವಕ್ಕೆ ಸರ್ವೆ ನಂಬರ್ 94/12 ಪಿ1 ರಲ್ಲಿ 10 ಗುಂಟೆ ಜಮೀನು ನಿಮಗೆ ಸೇರಿದ್ದು ಇದೆ ಎಂದರೆ ಸರಿಯಲ್ಲ.
11. ಕುಳ್ಳೇಗೌಡ ರವರ ಮಗ ತೋಪೇಗೌಡ ರವರಿಗೆ  4 ಎಕರೆ ಜಮೀನು ಸರ್ವೆ ನಂಬರ್ 94/12 ಪಿ1 ರಲ್ಲಿ ಸರ್ಕಾರದಿಂದ ಮಂಜೂರಾಗಿತ್ತು ಎಂದರೆ ಸರಿಯಲ್ಲ.
12. ಕುಳ್ಳೇಗೌಡ ರವರ ಮಗ ಜವರಗೌಡ ರವರಿಗೆ ಸರ್ವೆ ನಂಬರ್ 94/12 ಪಿ1 ರಲ್ಲಿ 10 ಗುಂಟೆ ಜಮೀನು ಅವರ ಭಾಗಕ್ಕೆ ಬಂದಿತ್ತು ಎಂದರೆ ಸರಿಯಲ್ಲ.
13. ಕುಳ್ಳೇಗೌಡ ರವರ ಮಗ ಸಣ್ಣೇಗೌಡ ರವರಿಗೆ ಸರ್ವೆ ನಂಬರ್ 94/12 ಪಿ1 ರಲ್ಲಿ 1 ಎಕರೆ 10 ಗುಂಟೆ ಜಮೀನು ಅವರ ಭಾಗಕ್ಕೆ ಬಂದಿತ್ತು ಎಂದರೆ ಸರಿಯಲ್ಲ.
14. ಸದರಿ ಸರ್ವೆ ನಂಬರ್ ನಲ್ಲಿ ಉಳಿಕೆ ಜಮೀನು 2 ಎಕರೆ 20 ಗುಂಟೆ ಜಮೀನು ತೋಪೇಗೌಡ ರವರ ಹೆಸರಿನಲ್ಲಿ ಇತ್ತು ಎಂದರೆ ನನಗೆ ಗೊತ್ತಿಲ್ಲ.
15. ಸರ್ವೆ ನಂಬರ್ 94/11 ಪಿ1 ರಲ್ಲಿ 2 ಎಕರೆ ಜಮೀನು ಸಣ್ಣೇಗೌಡ ಬಿನ್ ಕುಳ್ಳೇಗೌಡ ರವರಿಗೆ ಬಂದಿತ್ತು ಎಂದರೆ ಸರಿಯಲ್ಲ. ಸದರಿ ಜಮೀನಿನ ಪೂರ್ವಕ್ಕೆಃ ಜವರೇಗೌಡ ರವರ ಜಮೀನು ಎಂದರೆ ಸರಿಯಲ್ಲ. ಪಶ್ಚಿಮಕ್ಕೆಃ ಸಣ್ಣೇಗೌಡ ರವರ ಸಾಗುವಳಿ ಜಮೀನು ಎಂದರೆ ಸರಿಯಲ್ಲ. ಉತ್ತರಕ್ಕೆಃ ತಮ್ಮೆಗೌಡ ರವರ ಜಮೀನು ಎಂದರೆ ಸರಿಯಲ್ಲ ಮತ್ತು ದಕ್ಷಿಣಕ್ಕೆಃ ಹಾರಂಗಿ ನಾಲೆ ಎಂದರೆ ಸರಿ.
16. ಸರ್ವೆ ನಂಬರ್ 94/11 ಪಿ1 ರಲ್ಲಿ 2 ಎಕರೆ ಜಮೀನು ಜವರೇಗೌಡ ಬಿನ್ ಕುಳ್ಳೇಗೌಡ ರವರಿಗೆ ಬಂದಿತ್ತು ಎಂದರೆ ಸರಿಯಲ್ಲ. ಸದರಿ ಜಮೀನಿನ ಪೂರ್ವಕ್ಕೆಃ ಸಣ್ಣೇಗೌಡ ರವರ ಜಮೀನು ಎಂದರೆ ಸರಿಯಲ್ಲ. ಪಶ್ಚಿಮಕ್ಕೆಃ ಜವರೇಗೌಡ ರವರ ಉಳಿಕೆ ಜಮೀನು ಎಂದರೆ ಸರಿಯಲ್ಲ. ಉತ್ತರಕ್ಕೆಃ ತಮ್ಮೆಗೌಡ ರವರ ಜಮೀನು ಎಂದರೆ ಸರಿಯಲ್ಲ ಮತ್ತು ದಕ್ಷಿಣಕ್ಕೆಃ ಹಾರಂಗಿ ನಾಲೆ ಎಂದರೆ ಸರಿ.

17. ಪ್ರಸ್ತುತ ದಾವೆಯನ್ನು ಸಲ್ಲಿಸುವ ಕಾಲಕ್ಕೆ ಸುಳ್ಳು ಚಕ್ಕುಬಂದಿಯನ್ನು ನಮೂದು ಮಾಡಿ ದಾವೆಯನ್ನು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಪಿರಿಯಾಪಟ್ಟಣ